

ಅಮೃತ ಮಥನ

# ಸಾಮಾನ್ಯನ ಸಂಕ್ರಮಣ

## ಕೆಲವು ನೆನಪುಗಳು

ಶಿವಮೊಗ್ಗ ಜಿಲ್ಲೆಯ ಎನ್.ಎಸ್. ಹಾಲಪ್ಪನವರು ಗಾಂಧಿಯನ್ನು ಎರಡು ಬಾರಿ ಕಂಡವರು. ಮಹಾತ್ಮನ ಪ್ರಭಾವಕ್ಕೊಳಗಾದ ಅವರು, ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗಿಯಾಗಿ ಮುಂಬಯಿಯ ಆರ್ಥರ್ ರೋಡಿನ ಕಠಿಣ ಕಾರಾಗೃಹದಲ್ಲಿ ಹಾಗೂ ಪುಣೆಯ ಯರವಾಡಾ ಜೈಲಿನಲ್ಲಿ ಕಾರಾಗೃಹ ಶಿಕ್ಷೆಯನ್ನು ಅನುಭವಿಸಿದವರು. ಆ ಹಿರಿಯ ಚೇತನದ ಸ್ಮರಣೆ, ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಆಚರಣೆಯನ್ನು ಅರ್ಥಪೂರ್ಣ ಆಗಿಸಬಲ್ಲದು. ಈ ಬರಹದ ಲೇಖಕರು ಕನ್ನಡದ ಜನಪ್ರಿಯ ಸಿನಿಮಾ ನಿರ್ದೇಶಕರು ಹಾಗೂ ಹಾಲಪ್ಪನವರ ಪುತ್ರರು.

■ ಎನ್.ಎಸ್. ಶಂಕರ್

1929–30ರ ಕಾಲ. ಮಹಾತ್ಮ ಗಾಂಧಿಯವರು ಹೊನ್ನಾಳಿ ಗ್ರಾಮಕ್ಕೆ ಬರುವ ವರ್ತಮಾನ ಗೊತ್ತಾಯ್ತು. ನಾವೆಲ್ಲ ಗಾಂಧೀಜಿಯವರ ದರ್ಶನಕ್ಕೆ ಕಾತರರಾಗಿದ್ದೇವೆಂದು ನಮ್ಮ ಮುಖ್ಯೋಪಾಧ್ಯಾಯ ಮಂಜುನಾಥಯ್ಯನವರಿಗೆ ದುಂಬಾಲು ಬಿದ್ದೆವು. ನಮ್ಮ ತರಗತಿಯಲ್ಲಿ ನಿತ್ಯ ಒಂದು ಗಂಟೆ ಚರಕಾದಲ್ಲಿ ನೂಲುವ ಪರಿಪಾಠವಿತ್ತು. ನಮ್ಮ ಆಶೋತ್ತರಗಳಿಗೆ ಪ್ರೋತ್ಸಾಹ ಕೊಟ್ಟು ಮುಖ್ಯೋಪಾಧ್ಯಾಯರು ಚರಕಾಗಳನ್ನು ಹೊರಿಸಿಕೊಂಡು (ಶಿವಮೊಗ್ಗ ಜಿಲ್ಲೆಯ ನ್ಯಾಮತಿಯಿಂದ) ಹೊನ್ನಾಳಿಗೆ ನಡೆಸಿಕೊಂಡು ಕರೆದೊಯ್ದರು. ತಾಲ್ಲೂಕು ಕಚೇರಿ ಮುಂದೆ ಗಾಂಧೀಜಿಯವರಿಗಾಗಿ ಆಸನ ಏರ್ಪಡಿಸಲಾಗಿತ್ತು. ಮುಂದುಗಡೆ ಎರಡು ಸಾಲಾಗಿ ಕೂತು ನಾವು ನೂಲುತ್ತಿದ್ದೆವು. ಮಧ್ಯಾಹ್ನ ಮೂರು ಗಂಟೆಗೆ ಮಹಾತ್ಮಾಜಿ ಬಂದರು. ನೂಲುತ್ತಿದ್ದ ನಮ್ಮನ್ನೆಲ್ಲ ಹಸನ್ಮುಖದಿಂದ ನೋಡುತ್ತ ವೇದಿಕೆಯಲ್ಲಿ ಮಂಡಿಸಿದರು... ನಾವು ಕಲ್ಪನೆ ಮಾಡಿಕೊಂಡ ಗಾಂಧೀಜಿಗೂ ಪ್ರತ್ಯಕ್ಷ ಕಂಡ ಮಹಾತ್ಮರಿಗೂ ಯಾವುದೇ ಹೋಲಿಕೆಯಿರಲಿಲ್ಲ. ಇಡೀ ಹಿಂದೂಸ್ತಾನದಲ್ಲಿ ತನ್ನ ಚಟುವಟಿಕೆಗಳಿಂದ ಚೈತನ್ಯ ತುಂಬಿ ದೇಶದ ಸ್ವಾತಂತ್ರ್ಯಕ್ಕಾಗಿ ಸರ್ವತ್ಯಾಗ ಮಾಡಲು ಪ್ರೇರೇಪಿಸಿದ ವ್ಯಕ್ತಿಯು ಅತ್ಯಂತ ಭವ್ಯ ಹಾಗೂ ಆಕರ್ಷಕ ವ್ಯಕ್ತಿಯಾಗಿರಬೇಕೆಂಬ ಕಲ್ಪನೆ ನಮಗಿತ್ತು. ಗುಲಾಮಗಿರಿಯಿಂದ, ಸಾಮಾಜಿಕವಾಗಿ ಆರ್ಥಿಕವಾಗಿ ವಂಚಿಸಲ್ಪಟ್ಟು, ಶತಮಾನಗಳಿಂದ ತುಳಿಯಲ್ಪಟ್ಟ, ಒಪ್ಪೊತ್ತಿನ ಊಟವನ್ನೂ ಕಾಣದ ಹಿಂದೂಸ್ತಾನದ ಕೋಟ್ಯಂತರ ದೀನದಲಿತರ ಪ್ರತಿನಿಧಿ ಅವರಾಗಿದ್ದರು. ಮೊಳಕಾಲಿನವರೆಗೆ ಪಂಚೆ, ಮೈ ಮುಚ್ಚುವ ಒಂದು ವಲ್ಲಿ ಧರಿಸಿದ, ನಗುಮುಖವೊಂದೇ ಎದ್ದು ಕಾಣುವ ವಾಮನಮೂರ್ತಿಯಾಗಿ ಕಂಡರು.

ಅವರ ವೇದಿಕೆಗೆ ಎದುರಾಗಿ ಎರಡು ಸಾಲುಗಳಲ್ಲಿ ಹತ್ತೆಂಟು ಹುಡುಗರು ಕೂತು ರಾಟೆಗಳಿಂದ ನೂಲುತ್ತಿದ್ದೆವು. ನಮ್ಮನ್ನೆಲ್ಲ ಕೋಮಲ ಭಾವನೆಯಿಂದ ವೀಕ್ಷಿಸುತ್ತ ಮರಳಿ ಹೊರಡುವಾಗ ನಮ್ಮ ಸಮೀಪ ಬಂದು ಮುಗುಳ್ನಗುತ್ತ ಆಶೀರ್ವದಿಸಿದರು. ಅವರು ನನ್ನ ಬಳಿ ಬಂದು ತಲೆ ಸವರಿದ ಕೂಡಲೇ ನನ್ನ ಮೈಯಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ಅವರ ದರ್ಶನದಿಂದ ಈ ವಾಮನಮೂರ್ತಿಯಲ್ಲಿ ಯಾರಲ್ಲೂ ಕಾಣದ ಒಂದು ಅದ್ಭುತ ಶಕ್ತಿ ಅಡಗಿದೆಯೆಂಬ ಭಾವನೆ ಉಂಟಾಯಿತು. ಈ ಘಟನೆ ನಡೆದಾಗ, ಇದನ್ನು ನಿರೂಪಿಸುತ್ತಿರುವ ಬಾಲಕನಿಗೆ ಸುಮಾರು 13–14 ವರ್ಷ. ಎನ್.ಎಸ್. ಹಾಲಪ್ಪ ಎಂಬ ಆ ಬಾಲಕನೇ ನನ್ನ ತಂದೆ. ಗಾಂಧೀಜಿಯವರ ಆ ಸಂಕ್ಷಿಪ್ತ ಭೇಟಿಯೇ ನಿಮಿತ್ತವಾಗಿ ನನ್ನ ತಂದೆ ಇನ್ನೊಂದು ವರ್ಷದಲ್ಲಿ – ಅಂದರೆ ದೇಶಾದ್ಯಂತ 1930ರ ಉಪ್ಪಿನ ಸತ್ಯಾಗ್ರಹದ ಕಾವು ಆವರಿಸಿದಾಗ, ಹೇಳದೆ ಕೇಳದೆ ಮನೆ ಬಿಟ್ಟು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಲು ಮುಂಬೈ ಹಾದಿ ಹಿಡಿದರು.

ನಾವು ಏಳು ಮಂದಿ ಮಕ್ಕಳು. ಮನೆಯಲ್ಲಿ ನಾನೇ ಚಿಕ್ಕವನು. ಚಿಕ್ಕಂದಿನಲ್ಲೇ ತಾಯಿಯನ್ನು ಕಳೆದುಕೊಂಡಿದ್ದರಿಂದ, ನಮ್ಮಪ್ಪನೇ ನನಗೆ ತಂದೆ–ತಾಯಿ ಎರಡೂ ಆಗಿ ಆತುಕೊಂಡರು. ಅವರು ಯಾವಾಗಲಾದರೊಮ್ಮೆ ತಮ್ಮ ಸ್ವಾತಂತ್ರ್ಯ ಸಂಗ್ರಾಮ ಅನುಭವದ ತುಣುಕುಗಳನ್ನು ಮೆಲುಕು ಹಾಕುವಾಗ ನನಗೆ ಎಲ್ಲಿಲ್ಲದ ಕುತೂಹಲ. ಒಮ್ಮೆ ಪೊಲೀಸರು ಹುಡುಕಿಕೊಂಡು ಬಂದಾಗ ಸರ್ರನೆ ಗಳದ ಮೇಲಿದ್ದ ಸೀರೆ ಸೆಳೆದುಕೊಂಡು ಉಟ್ಟು, ತಲೆ ತುಂಬ ಸೆರಗು ಹೊದ್ದು ಅಡುಗೆಮನೆಯಲ್ಲಿ ರೊಟ್ಟಿ ಬಡಿಯುತ್ತ ಬಚಾವಾಗಿದ್ದನ್ನು ನಿರೂಪಿಸಿದ್ದರು. ಅದನ್ನೆಲ್ಲ ಕೇಳಿ ನಾನೇ ಅವರ ಅನುಭವ ಕಥನ ಬರೆಯುವಂತೆ ದುಂಬಾಲು ಬಿದ್ದೆ. ಅದರ ಪರಿಣಾಮ – ಜೀವಮಾನದಲ್ಲೇ ಏನೊಂದೂ ಬರೆಯದಿದ್ದ ನಮ್ಮಪ್ಪ ಹದಿನೈದೇ ದಿನಗಳಲ್ಲಿ ನೂರು ಪುಟಕ್ಕೂ ಮಿಕ್ಕಿದ ತಮ್ಮ ಅನುಭವ ಕಥನ ಬರೆದರು. ದುರದೃಷ್ಟವಶಾತ್, ಆ ಪುಸ್ತಕ ಅವರು ಬದುಕಿದ್ದಾಗ ಬೆಳಕಿಗೆ ಬಾರದೆ, ನಂತರ ಕೋಲಾರದ ಆದಿಮ ಪ್ರಕಾಶನದಿಂದ ಪ್ರಕಟಣೆಯಾಯಿತು. ಈ ಬರಹದ ವಿವರಗಳೆಲ್ಲ 'ಸಾಮಾನ್ಯನ